# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1200/2021
ಮಂಡನಾಧಿಕಾರಿಗಳ ಶಾಖೆ, ಎಆರ್‌ಇ-18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 05/10/2021

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ ಸೂರ್ಯಕಾಂತ ತಂದೆ ಬಸವರಾಜ ಜಮಾದಾರ, ಗ್ರಾಮ ಲೆಕ್ಕಾಧಿಕಾರಿಗಳು, ಕಟ್ಟಿ ಸಂಗಾವಿ ಗ್ರಾಮ, ತಾ: ಜೇವರ್ಗಿ, ಜಿಲ್ಲೆ: ಕಲ್ಬುರ್ಗಿ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

*****

ಕಲಬುರ್ಗಿ ಜಿಲ್ಲೆ, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ ಸೂರ್ಯಕಾಂತ ತಂದೆ ಬಸವರಾಜ ಜಮಾದಾರ, ಗ್ರಾಮ ಲೆಕ್ಕಾಧಿಕಾರಿಗಳು, ಕಟ್ಟಿ ಸಂಗಾವಿ ಗ್ರಾಮ, ತಾ: ಜೇವರ್ಗಿ, ಜಿಲ್ಲೆ: ಕಲಬುರ್ಗಿ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ಶ್ರೀ ಹನುಮಂತ ತಂದೆ ಶಿವರಾಯ ತಳವಾರ ಸಾ: ಕಟ್ಟಿ ಸಂಗಾವಿ ಗ್ರಾಮ, ತಾ: ಜೇವರ್ಗಿ, ಜಿಲ್ಲೆ: ಕಲ್ಬುರ್ಗಿ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ). ಇವರು ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರ ಕೆಲಸವನ್ನು ಮಾಡಿಕೊಡಲು ಲಂಚದ ಹಣ ಕೇಳಿ ಪಡೆದುಕೊಂಡು ದುರ್ನಡತೆ ತೋರಿಸಿರುತ್ತಾರೆ ಎಂದು ಸಲ್ಲಿಸಿದ ವರದಿಯ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಳ್ಳಲಾಗಿದೆ.

2) ದೂರಿನ ಸಂಕ್ಷಿಪ್ತ ಸಾರಾಂಶ:–

i. ದೂರುದಾರರಾದ ಹನುಮಂತ ತಂದೆ ಶಿವರಾಯ ತಳವಾರ ಸಾ: ಕಟ್ಟಿ ಸಂಗಾವಿ ಗ್ರಾಮ, ತಾ: ಜೇವರ್ಗಿ, ಜಿಲ್ಲೆ: ಕಲ್ಬುರ್ಗಿ ಇವರು ಕಟ್ಟಿ ಸಂಗಾವಿಗೆ ಸೇರಿದ ಸರ್ವೆ ನಂ. 15/ಈ ನೇದ್ದರಲ್ಲಿ 6.05 ಎಕರೆ ಜಮೀನಿನ ಪಹಣಿಯ ಕಾಲಂ 11 ರಲ್ಲಿ ಇತರೆ ಹಕ್ಕುಗಳು ಮತ್ತು ಋಣಗಳು ಎಂಬಲ್ಲಿ ಸಹಾಯಕ ಆಯುಕ್ತರವರ ಹೆಸರು ನಮೂದು ಇರುವುದರಿಂದ ದೂರುದಾರರು ಅದನ್ನು ತೆಗೆದು ಹಾಕಲು ಎದುರುದಾರರಾದ ಶ್ರೀ ಸೂರ್ಯಕಾಂತ ತಂದೆ ಬಸವರಾಜ ಜಮಾದಾರ, ಗ್ರಾಮ ಲೆಕ್ಕಾಧಿಕಾರಿಗಳು, ಕಟ್ಟಿ ಸಂಗಾವಿ ಗ್ರಾಮ, ತಾ: ಜೇವರ್ಗಿ, ಜಿಲ್ಲೆ: ಕಲ್ಬುರ್ಗಿ ರವರಿಗೆ ದಿನಾಂಕ 25/01/2017 ರಂದು ಅರ್ಜಿ ನೀಡಿರುತ್ತಾರೆ. ಆದರೆ ಎದುರುದಾರರು ದಾಖಲಾತಿಗಳನ್ನು ಪರಿಶೀಲಿಸಿ ಭೂಮಿ ಮೇಲೆ ಬೇಬಾಕಿ ರೂ. 2,306/– ಗಳು ಕೊಟ್ಟಿರುವುದು ಬಾಕಿ ಇರುತ್ತದೆ. ಅದನ್ನು ಕಟ್ಟಲು ಹೇಳಿದ ಪ್ರಕಾರ ದೂರುದಾರರು ಬೇಬಾಕಿ ರೂ. 2,306/– ಗಳನ್ನು ಕಟ್ಟಿರುವ ಬ್ಯಾಂಕ್ ಚಲನ್ ತೋರಿಸಿದಾಗ ಎದುರುದಾರರು ಕೆಲಸ ಮಾಡಿಕೊಡಲು ರೂ. 30,000/– ಲಂಚದ ಹಣವನ್ನು ಕೊಡುವಂತೆ ಬೇಡಿಕೆ ಇಟ್ಟಿದ್ದು ದೂರುದಾರರು ತನ್ನ ಹತ್ತಿರ ಅಷ್ಟೊಂದು ಹಣ ಇಲ್ಲ, ಇನ್ನು ಕಡಿಮೆ ಮಾಡಿರಿ ಅಂತ ಕೇಳಿದಾಗ ಎದುರುದಾರರು ರೂ. 30,000/– ಕ್ಕಿಂತ ಕಡಿಮೆ ಆಗುವುದಿಲ್ಲ ಎಂದು ತಿಳಿಸಿರುತ್ತಾರೆ. ಆಗ ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದ ಕಾರಣ ಲಂಚ ಕೇಳಿದ ಎದುರುದಾರರ ಮೇಲೆ ದೂರು ನೀಡುವ ಸಲುವಾಗಿ ದೂರುದಾರರು ತಮ್ಮ ಮೊಬೈಲ್‌ನಲ್ಲಿ ಎದುರುದಾರರು ಲಂಚ ಕೇಳುವುದನ್ನು ರೆಕಾರ್ಡ್ ಮಾಡಿಕೊಳ್ಳಲು ತಮ್ಮ ಮೊಬೈಲ್‌ನ್ನು ಚಾಲು ಮಾಡಿಕೊಂಡು ದಿನಾಂಕ 07/02/2017 ರಂದು ಮಧ್ಯಾಹ್ನ ಸುಮಾರು 3–00 ಘಂಟೆಗೆ ಎದುರುದಾರರನ್ನು ಜೇವರ್ಗಿ ಮಿನಿ ವಿಧಾನಸೌಧದಲ್ಲಿ ಭೇಟಿಯಾಗಿ ತಮ್ಮ ಕೆಲಸದ ಬಗ್ಗೆ ಮಾತನಾಡಿದಾಗ ಎದುರುದಾರರು ಮೊದಲು 18,000/– ರೂಪಾಯಿ ಕೇಳಿ ಆಮೇಲೆ 15,000/– ರೂ. ಕೊಡುವಂತೆ ಬೇಡಿಕೆ ಇಟ್ಟಿದ್ದು ದೂರುದಾರರು ತಮ್ಮ ಬಳಿ ಅಷ್ಟು ಹಣ ಇರುವುದಿಲ್ಲ, ಈಗ ರೂ. 5,000/–

ತಗೊಳ್ಳಿ ಎಂದು ಹೇಳಿ 2,000/- ರೂಪಾಯಿ ಮುಖ ಬೆಲೆಯ ಮೂರು ನೋಟು (ರೂ. 6,000/-) ಗಳನ್ನು ಕೊಟ್ಟಾಗ ಎದುರುದಾರರು ಮರಳಿ 1,000/- ರೂಪಾಯಿ ದೂರುದಾರರಿಗೆ ಕೊಡದೆ ಆ ಮೂರೂ ನೋಟುಗಳನ್ನು ಇಟ್ಟುಕೊಂಡಿರುತ್ತಾರೆ. ಉಳಿದ ರೂ. 9,000/- ಲಂಚದ ಹಣವನ್ನು ನಂತರ ಕೊಡುವಂತೆ ಆಮೇಲೆ ಕೊಡುವಂತೆ ತಿಳಿಸಿರುತ್ತಾರೆ. ಎದುರುದಾರರು ದೂರುದಾರರೊಂದಿಗೆ ನಡೆಸಿದ ಈ ಎಲ್ಲಾ ಸಂಭಾಷಣೆಗಳು ದೂರುದಾರರ ಮೊಬೈಲ್‌ನಲ್ಲಿ ರೆಕಾರ್ಡ್ ಆಗಿರುತ್ತದೆ.

**ii.** ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 10/02/2017 ರಂದು ಬೆಳಿಗ್ಗೆ 10-30 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ಕಲಬುರಗಿ ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯವರ ಮುಂದೆ ದೂರನ್ನು ನೀಡಿದ ಮೇಲೆ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 03/2017 ಪಿ.ಸಿ. ಕಾಯಿದೆ ಕಲಂ 7 ರಡಿ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

**iii.** ತನಿಖಾಧಿಕಾರಿಯವರು ಇಬ್ಬರು ಪಂಚರನ್ನು ಕರೆಯಿಸಿ ವಹಿಸಿಕೊಡುವ ಪಂಚನಾಮೆ ಜರುಗಿಸುವ ಕಾಲಕ್ಕೆ ದೂರುದಾರರಿಗೆ ಸಂಭಾಷಣೆ ರೆಕಾರ್ಡ್ ಆದ ಮೊಬೈಲ್‌ನ್ನು ಹಾಜರುಪಡಿಸಲು ತಿಳಿಸಿದ ಮೇರೆಗೆ ದೂರುದಾರರು ತಮ್ಮ ಮೊಬೈಲ್‌ನ್ನು ಹಾಜರುಪಡಿಸಿದಾಗ ತನಿಖಾಧಿಕಾರಿಗಳು ಮೊಬೈಲ್‌ನಲ್ಲಿದ್ದ ಸಂಭಾಷಣೆಯನ್ನು ಕಂಪ್ಯೂಟರ್ ಮೂಲಕ ಸಿ.ಡಿ.ಗೆ ವರ್ಗಾವಣೆ ಮಾಡಿ ಅವುಗಳ ಎರಡು ಪ್ರತಿಗಳನ್ನು ಮಾಡಿ ಎರಡು ಸಿ.ಡಿ. ಗಳನ್ನು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ.

**iv.** ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದೂರುದಾರರು ಪಂಚ ಸಾಕ್ಷಿಗಳು ಹಾಗೂ ಸಿಬ್ಬಂಧಿಯವರೊಂದಿಗೆ ಎರಡು ಸರ್ಕಾರಿ ವಾಹನಗಳಲ್ಲಿ ಜೇವರ್ಗಿ ಕಡೆಗೆ ಹೊರಟು ಸುಮಾರು ಸಾಯಂಕಾಲ 4-00 ಘಂಟೆಗೆ ಮಿನಿ ವಿಧಾನಸೌಧ ಜೇವರ್ಗಿಗೆ ತಲುಪಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಎದುರುದಾರರೊಂದಿಗೆ ಮೊಬೈಲ್‌ನಲ್ಲಿ ಮಾತನಾಡಿ "ಎಲ್ಲಿಗೆ ಬರಬೇಕು" ಎಂದು ಕೇಳಲು ಸೂಚಿಸಿದಾಗ ದೂರುದಾರರು ಎದುರುದಾರರಿಗೆ ಫೋನ್

ಮಾಡಿದಾಗ ಎದುರುದಾರರು ಫೋನ್ ಸ್ವೀಕರಿಸಿರುವುದಿಲ್ಲ. ಸ್ವಲ್ಪ ಸಮಯದ ನಂತರ ಎದುರುದಾರರು ದೂರುದಾರರಿಗೆ ಫೋನ್ ಮಾಡಿ ಮಿನಿ ವಿಧಾನಸೌಧದ ಆವರಣದಲ್ಲಿರುವ ನಂದಿನಿ ಟೀ ಸ್ಟಾಲ್ ಹತ್ತಿರ ತಾನು ಇದ್ದು ಅಲ್ಲಿಗೇ ಬರಲು ಹೇಳಿರುತ್ತಾರೆ. ನಂತರ ತನಿಖಾಧಿಕಾರಿಗಳು ಎಲ್ಲರನ್ನೂ ಕರೆದುಕೊಂಡು ಜೇವರ್ಗಿ ಮಿನಿ ವಿಧಾನ ಸೌಧದ ಆವರಣದಲ್ಲಿರುವ ನಂದಿನಿ ಟೀ ಸ್ಟಾಲ್ ಹತ್ತಿರ ಬಂದು ಸ್ವಲ್ಪ ದೂರದಲ್ಲಿ ಮರೆಯಾಗಿ ತಮ್ಮ ಸಿಬ್ಬಂದಿಯೊಂದಿಗೆ ನಿಂತುಕೊಂಡು ದೂರುದಾರರು ಹಾಗೂ ನೆರಳು ಸಾಕ್ಷಿಯಾದ ಶೇಖ ಮಿರಾನ ಮೊಹಿದ್ದಿನ ಪಟೇಲ್‌ರವರಿಗೆ ಹಣ ವಹಿಸಿಕೊಡುವ ಪಂಚನಾಮೆ ಕಾಲಕ್ಕೆ ನೀಡಿದ ಸೂಚನೆ ಹಾಗೂ ತಿಳುವಳಿಕೆಗಳನ್ನು ಮತ್ತೊಮ್ಮೆ ನೀಡಿ ಎದುರುದಾರರನ್ನು ಭೇಟಿಯಾಗಲು ಕಳುಹಿಸಿರುತ್ತಾರೆ. ಅವರಿಬ್ಬರೂ ಎದುರುದಾರರು ಇರುವ ಜೇವರ್ಗಿ ಮಿನಿ ವಿಧಾನ ಸೌಧದ ಆವರಣದಲ್ಲಿರುವ ನಂದಿನಿ ಟೀ ಸ್ಟಾಲ್‌ಗೆ ಹೋದಾಗ ಎದುರುದಾರರು ನಂದಿನಿ ಟೀ ಸ್ಟಾಲಿನ ಬಲಗಡೆ ಪಶ್ಚಿಮ ದಿಕ್ಕಿಗೆ ಮುಖ ಮಾಡಿ ಪ್ಲಾಸ್ಟಿಕ್ ಚೇರ್ ಮೇಲೆ ಕುಳಿತುಕೊಂಡಿರುವುದನ್ನು ನೋಡಿ ದೂರುದಾರರು ಎದುರುದಾರರಿಗೆ ನಮಸ್ಕರಿಸಿ ಎದುರುದಾರರು ಕುಳಿತ ಸ್ಥಳದ ಪಕ್ಕದಲ್ಲಿರುವ ಪ್ಲಾಸ್ಟಿಕ್ ಚೇರ್ ಮೇಲೆ ಉತ್ತರ ದಿಕ್ಕಿಗೆ ಮುಖ ಮಾಡಿ ಕುಳಿತುಕೊಂಡು ಎದುರುದಾರರಿಗೆ ತಮ್ಮ ಕೆಲಸವನ್ನು ಜಲ್ದಿ ಮಾಡಿಕೊಡಲು ಹೇಳಿದಾಗ ಎದುರುದಾರರು ಉಳಿದ ಬ್ಯಾಲೆನ್ಸ್ ರೂ. 9,000/– ಕೊಡು ಜಲ್ದಿ ಕೆಲಸ ಮಾಡಿಕೊಡುತ್ತೇನೆಂದು ಹೇಳಿದಾಗ ದೂರುದಾರರು ತಮ್ಮ ಅಂಗಿಯ ಎದೆಯ ಮೇಲಿನ ಜೇಬಿನಲ್ಲಿದ್ದ ಫಿನಾಪ್ತಲಿನ್ ಪೌಡರ್ ಲೇಪಿತ ರೂ. 9,000/– ಗಳನ್ನು ತೆಗೆದು ಕೊಟ್ಟಾಗ ಎದುರುದಾರರು ಲಂಚದ ಹಣವನ್ನು ಪಡೆದುಕೊಂಡು ತಮ್ಮ ಎರಡೂ ಕೈಗಳಿಂದ ಎಣಿಸಿ ತಮ್ಮ ಪ್ಯಾಂಟಿನ ಎಡ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ಆ ಸ್ಥಳದಿಂದ ಸ್ವಲ್ಪ ದೂರ ಬಂದು ತನ್ನ ಕೈ ವಸ್ತ್ರದಿಂದ ಮುಖ ವರೆಸಿಕೊಳ್ಳುವುದರ ಮೂಲಕ ನಿಗದಿತ ಸಿಗ್ನಲ್‌ನ್ನು ನೀಡಿರುತ್ತಾರೆ. ಆಗ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿಯವರೊಂದಿಗೆ ಅಲ್ಲಿಗೆ ಬಂದಾಗ ದೂರುದಾರರು ಎದುರುದಾರರನ್ನು ತೋರಿಸಿ ಇವರೇ ತನ್ನಿಂದ ಲಂಚದ ಹಣವನ್ನು ಪಡೆದುಕೊಂಡಿರುತ್ತಾರೆಂದು

ತಿಳಿಸಿದಾಗ ತನಿಖಾಧಿಕಾರಿಗಳು ಎದುರುದಾರರ ಎರಡೂ ಮುಂಗೈಗಳನ್ನು ಹಿಡಿದುಕೊಂಡು ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಸಿದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಅದೇ ರೀತಿ ಎಡಗೈ ಬೆರಳುಗಳನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಸಿದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಗಳು ಎದುರುದಾರರಿಂದ ಲಂಚದ ಹಣವಾದ ರೂ. 9,000/- ಗಳನ್ನು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ಬದಲಿ ಪ್ಯಾಂಟಿನ ವ್ಯವಸ್ಥೆ ಮಾಡಿ ಎದುರುದಾರರು ಧರಿಸಿದ್ದ ಪ್ಯಾಂಟನ್ನು ಕಳಚಿಕೊಡುವಂತೆ ಸೂಚಿಸಿದ ಮೇರೆಗೆ ಎದುರುದಾರರು ತಮ್ಮ ಪ್ಯಾಂಟನ್ನು ಕಳಚಿ ಕೊಟ್ಟಾಗ ಪ್ಯಾಂಟಿನ ಎಡ ಪಾಕೇಟ್‌ನ್ನು ಉಲ್ಟಾ (ತಿರುಗಿಸಿ) ಮಾಡಿ ಅದನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಸಿದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ದ್ರಾವಣಗಳನ್ನು ಮತ್ತು ಪ್ಯಾಂಟನ್ನು ಪಂಚರ ಸಮಕ್ಷಮ ತನಿಖಾಧಿಕಾರಿಗಳು ಅಮಾನತ್‌ಪಡಿಸಿಕೊಂಡಿರುತ್ತಾರೆ. ಹಣ ವಹಿಸಿಕೊಡುವ ಪಂಚನಾಮೆ ಕಾಲಕ್ಕೆ ದೂರುದಾರರ ಮೊಬೈಲ್‌ನಲ್ಲಿದ್ದ, ಎದುರುದಾರರು ಮತ್ತು ದೂರುದಾರರ ಸಂಭಾಷಣೆಯನ್ನು ಎರಡು ಸಿ.ಡಿ.ಗಳಿಗೆ ಪರಿವರ್ತಿಸಿದವುಗಳನ್ನು ಎದುರುದಾರರ ಹಿರಿಯ ಅಧಿಕಾರಿಯಾದ ಗ್ರೇಡ್-1 ತಹಶೀಲ್ದಾರರಾದ ಶ್ರೀ ಯಲ್ಲಪ್ಪ ತಂದೆ ಭುಜಂಗಪ್ಪ ಸುಬೇದಾರ್‌ರವರಿಗೆ ಸಂಭಾಷಣೆಯನ್ನು ಕೇಳಿಸಲಾಗಿ ಲಂಚದ ಹಣದ ಬೇಡಿಕೆ ಇಟ್ಟಿರುವ ವ್ಯಕ್ತಿಯ ಧ್ವನಿಯು ತಮ್ಮ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಎದುರುದಾರರದ್ದು ಇರುತ್ತದೆ ಎಂದು ಗುರ್ತಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ಲಂಚದ ಹಣ 9,000/- ರೂ. ಜಪ್ತಿ ಮಾಡಿರುವ ಬಗ್ಗೆ ಸ್ವ ರಕ್ಷಣಾತ್ಮಕ ಹೇಳಿಕೆ ಬರೆದುಕೊಡಲು ತಿಳಿಸಿದ ಪ್ರಕಾರ ಎದುರುದಾರರು ಬರೆದುಕೊಟ್ಟಿದ್ದು ಅದರಲ್ಲಿ "ನಾನು ಸೂರ್ಯಕಾಂತ ಬಸವರಾಜ ಜಮಾದಾರ, ಗ್ರಾಮ ಲೇಖಾಪಾಲಕರು, ಕಟ್ಟಿ ಸಂಗಾವಿ ಇದ್ದು ಈ ರೂಪಾಯಿ ತೆಗೆದುಕೊಳ್ಳಿ ಸರ್ ಅಂತ ಅವನು ಹೇಳಿದ ನಾನು ತೆಗೆದುಕೊಂಡೆ, ಅಷ್ಟರಲ್ಲಿ ಎ.ಸಿ.ಬಿ ಅಧಿಕಾರಿಗಳು ನನಗೆ

ಬಂದು ಹಿಡಿದರು. ಆ ವ್ಯಕ್ತಿಯ ಯಾವುದೇ ಕೆಲಸ ನನ್ನ ಹತ್ತಿರ ಇರುವುದಿಲ್ಲ. ಇದಕ್ಕೆ ನನಗೆ ಯಾವುದೇ ಸಂಬಂಧ ಇರುವುದಿಲ್ಲ" ಎಂದು ನಮೂದಿಸಿದ ಸ್ವರಕ್ಷಣಾತ್ಮಕ ಹೇಳಿಕೆಯ ಮೇಲೆ ಪಂಚರು ಹಾಗೂ ತನಿಖಾಧಿಕಾರಿಗಳು ಸಹಿ ಮಾಡಿ ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ.

**v.** ಎದುರುದಾರರು ತಮ್ಮ ಸಮಜಾಯಿಸಿಯನ್ನು ದಿನಾಂಕ 16/08/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಸಿಯನ್ನು ಪರಿಶೀಲಿಸಲಾಗಿ ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಎದುರುದಾರರು ನೀಡಿರುವ ಸಮಜಾಯಿಸಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

3) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ಎದುರುದಾರರು, ದೂರುದಾರರು ಕಟ್ಟಿ ಸಂಗಾವಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 15/ಈ ನೇದರಲ್ಲಿ 6.05 ಎಕರೆ ಜಮೀನಿನ ಪಹಣಿಯ ಕಾಲಂ 11 ರಲ್ಲಿ ಇತರೆ ಹಕ್ಕುಗಳು ಮತ್ತು ಋಣಗಳು ಎಂಬಲ್ಲಿ ಸಹಾಯಕ ಆಯುಕ್ತರ ಹೆಸರು ನಮೂದು ಇರುವುದರಿಂದ ದೂರುದಾರರು ಅದನ್ನು ತೆಗೆದು ಹಾಕಲು ಸಲ್ಲಿಸಿರುವ ಅರ್ಜಿಯ ಮೇಲೆ ಎದುರುದಾರರು ಕೆಲಸ ಮಾಡಿಕೊಡಲು ರೂ. 30,000/- ಗಳ ಲಂಚದ ಹಣವನ್ನು ಕೊಡುವಂತೆ ಬೇಡಿಕೆ ಇಟ್ಟು ಸದರಿ ಹಣವನ್ನು ದಿನಾಂಕ 10/02/2017 ರಂದು ಎದುರುದಾರರು ದೂರುದಾರರಿಂದ ಪಡೆದುಕೊಂಡಿದ್ದು, ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ದೆ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

4) ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ ಶ್ರೀ ಸೂರ್ಯಕಾಂತ ತಂದೆ ಬಸವರಾಜ ಜಮಾದಾರ, ಗ್ರಾಮ ಲೆಕ್ಕಾಧಿಕಾರಿಗಳು, ಕಟ್ಟಿ ಸಂಗಾವಿ ಗ್ರಾಮ, ತಾ:

ಜೇವರ್ಗಿ, ಜಿಲ್ಲೆ: ಕಲ್ಬುರ್ಗಿ ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

5) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

7/10/21

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.